ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಲ್ಯಾಪ್ಸ್ ಮಾಡಿದರೂ ಅಡ್ಡಿಯಿಲ್ಲ.

ಅಧ್ಯಕ್ಷರು.—ನೀವು ಹಾಗೂ ಹೇಳುತ್ತಿದ್ದೀರಿ, ಹೀಗೂ ಹೇಳುತ್ತೀರಿ.

ಶ್ರೀ ಎಂ. ಚಂದ್ರಶೇಖರ್.— ಬೆಳಗಾವಿಯಿಂದ ಈಗ ಹತ್ತು-ಹದಿನೈದು ದಿವಸಗಳ ಹಿಂದೆ ಕೆಲವರು ಬಂದಿದ್ದರು. ಅದರ ಬಗ್ಗೆ ನಾವು ನಮ್ಮ ಇಲಾಖೆಗೆ ತಿಳಿಸಿದ್ದೇವೆ. ಹಸಿರು ಕಾರ್ಡ್ ಅಲ್ಲದೇನೆ ತಹಸೀಲ್ದಾರರು ಯಾರಿಂದಲೋ ಈತಿ ೩೦೦ ರೂಪಾಯಿಗಳಿಗಿಂತ ಕಡಿಮೆ ಆದಾಯ ಇದೆಯೆಂದು ಅಂದಾಗ ಅದನ್ನು ಒಪ್ಪಿಕೊಳ್ಳಿ ಎಂದು ಆ ರೀತಿ ತಿಳಿಸಿದ್ದೇವೆ. ಆದರೆ ಇದು ನಿಯಮ ಬದ್ಧವಾಗಿ, ಆಜ್ಞೆ ರೂಪದಲ್ಲಿ ಆಗಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆ ಅದನ್ನು ಮಾಡಬೇಕಾಗಿದೆ, ಅದನ್ನು ಸಂಪರ್ಕಿಸಿ ಇದನ್ನು ಮಾಡೋಣ.

## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಒನೇ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಅದರ ಜೊತೆಗೆ ದಿನಾಂಕ ೨೨-೨-೧೯೬೯ರ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಒನೇ ಪಟ್ಟಿಯನ್ನು ಮತ್ತು ಮುಂದೂಡಲಾಗಿದ್ದ ೮ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

## ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ

೨೩೫. ಶ್ರೀ ಪಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ಸರ್ಕಾರದ ಬಹುತೇಕ ಪದವಿಪೂರ್ವ ಕಾಲೇಜಿನಲ್ಲಿ ಆಂಗ್ಲ, ಭೌತಶಾಸ್ತ್ರ, ವಾಣಿಜ್ಯಶಾಸ್ತ್ರ ಮುಂತಾದ ವಿಷಯದ ಶಿಕ್ಷಕರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ರೀತಿ ಶಿಕ್ಷಕರ ಸಮಸ್ಯೆಯಿಂದ ಗ್ರಾಮೀಣ ಪ್ರದೇಶದ ಮಕ್ಕಳು ಉತ್ತಮ ಶಿಕ್ಷಣದಿಂದ ವಂಚಿತರಾದಂತೆ ಆಗುವುದಿಲ್ಲವೇ.

ಇ) ಈ ವರ್ಷವಾದರೂ ಎಲ್ಲ ಶಿಕ್ಷಕರುಗಳನ್ನು ಎಲ್ಲ ಪದವಿ ಪೂರ್ವ ಕಾಲೇಜಿಗೆ ನೇಮಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಖಾಲಿಯಿರುವ ಉಪನ್ಯಾಸಕರುಗಳ ಹುದ್ದೆಗೆ ತಾತ್ಕಾಲಿಕವಾಗಿ ಅರೆ ಕಾಲಿಕ ಉಪನ್ಯಾಸಕರುಗಳನ್ನು ನೇಮಿಸಿಕೊಳ್ಳುವಂತೆ ಪ್ರಾಚಾರ್ಯರಿಗೆ ತಿಳಿಸಿರುವುದರಿಂದ ಮಕ್ಕಳಿಗೆ ಯಾವುದೇ ತೊಂದರೆಯು ಸಾಧ್ಯತೆ ಇರುವುದಿಲ್ಲ.

ಇ) ಹೌದು.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

### ಹತ್ತಿ ಬೀಜೋತ್ಪಾದನೆಯ ಬಗ್ಗೆ

೩೩೪ ಅ. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅತಿ ಮುಖ್ಯವಾಗಿ ನೀರಿನ ಆಶ್ರಯದಲ್ಲಿ ಹತ್ತಿ ಬೆಳೆಯುವ ಜಿಲ್ಲೆಗಳಾವುವು ? ಭೂಮಿಯ ವಿಸ್ತೀರ್ಣವೆಷ್ಟು.

ಆ) ಈ ವಿಸ್ತೀರ್ಣಕ್ಕೆ ಅನುಗುಣವಾಗಿ ಬೀಜದ ದಾಸ್ತಾನು ಮಾಡಲಾಗುವುದೇ ? ದಾಸ್ತಾನು ಮಾಡುವ ವಿವರಣೆಯೊದಗಿಸುವುದು.

ಇ) ಬೀಜ ನಿಗಮದಿಂದ ಬೀಜೋತ್ಪಾದನೆ ಮಾಡುವ ವ್ಯವಸ್ಥೆಯಲ್ಲಿ ಎಷ್ಟು ಜನ ರೈತರು ನೋಂದಾಯಿಸಿದ್ದಾರೆ ? ಇವರ ಒಟ್ಟು ಉತ್ಪನ್ನ ಎಷ್ಟು.